NARAYANA NETHRALAYA
Vision Rehabilitation
- Redefining Insight, Reviving Independence -

CELEBRATING 40 YEARS IN EYE CARE

NARAYANA NETHRALAYA
your faith shall heal you



# ವಿಷನ್
# ರಿಹ್ಯಾಬಿಲಿಟೇಶನ್



## ದೃಷ್ಟಿ ಪುನರ್ವಸತಿಗೆ ಮುನ್ನಡೆಯುವುದು

**ನೀವು ನೋಡುತ್ತಿರುವುದು ಕೇವಲ ನಿಮ್ಮ ಕಣ್ಣುಗಳ ಕಾರ್ಯಗಳನ್ನು ಮಾತ್ರವಲ್ಲ, ಜೊತೆಗೆ ನಿಮ್ಮ ಅಂತರ್ದೃಷ್ಟಿಯ ಸಾಮರ್ಥ್ಯವನ್ನು ನೀವು ನೋಡುತ್ತಿದ್ದೀರಿ.**

ವೈದ್ಯ ಲೋಕದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಶೋಧನೆಯಲ್ಲಿ ಎಷ್ಟೇ ಅಭಿವೃದ್ಧಿಗೊಂಡಿದ್ದರೂ ಸಹ ರೋಗಿಗಳ ಎಲ್ಲಾ ರೀತಿಯ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಕೆಲವು ತೊಂದರೆಗಳನ್ನು ಮಾತ್ರ ಬಗೆಹರಿಸುತ್ತಾರೆ. ಇನ್ನೂ ಕೆಲವು ತೊಂದರೆಗಳನ್ನು ನುರಿತ ತಜ್ಞರು ಸಹ "ಏನೂ ಮಾಡಲು ಸಾಧ್ಯವಿಲ್ಲ". ಎಂದು ಸುಮ್ಮನಿದ್ದು ಬಿಡುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ಉತ್ತಮ ಉದಾಹರಣೆ ಎಂದರೆ ನುರಿತ ನೇತ್ರತಜ್ಞರು ಸಹ "ಅಂಧತ್ವವನ್ನು ಚಿಕಿತ್ಸೆಯಿಂದ ಗುಣಪಡಿಸಲಾಗುವುದಿಲ್ಲ" ಎಂದು ಬಿಡುತ್ತಾರೆ. ಇಂಥ ಒಬ್ಬ ರೋಗಿಗೆ ಬಾಗಿಲು ಮುಚ್ಚುವುದು ಹಾಗೂ ಆತನ ಜೀವನವಿಡೀ ಹತಾಶೆ ಮತ್ತು ದುಃಖಕ್ಕೆ ತಳ್ಳುವುದು ಸುಲಭ ಸಂಗತಿಯಾಗಿದೆ.


ಹೆಲನ್ ಕೆಲ್ಲರ್ "ಏನೂ ಮಾಡಲಾಗದು ಎಂದು ಎಂದಿಗೂ ಹೇಳಬೇಡಿ" ಎಂದು ಹೇಳುತ್ತಾರೆ. ಯಾವಾಗಲೂ ಪುನಸ್ಥಾಪನೆ ಎಂಬ ಪರಿಹಾರೋಪಾಯ ಇರುತ್ತದೆ. ಆಕೆ ತಮ್ಮ ಜೀವನವು ಒಂದು ಆದರ್ಶಮಯ ಉದಾಹರಣೆಯಾಗುವಂತೆ ಬದುಕಿ ಬಾಳಿದಳು.

ನಾರಾಯಣ ನೇತ್ರಾಲಯವು ಆಕೆಯ ಆದರ್ಶವನ್ನು ಸಾಕಾರಗೊಳಿಸಲು "ಪಿಡಿಯಾಟ್ರಿಕ್ ವಿಷನ್ ರಿಹ್ಯಾಬಿಲಿಟೇಷನ್ ಅಂಡ್ ಲೋ ವಿಷನ್ ಸೆಂಟರ್" [ಮಕ್ಕಳ ದೃಷ್ಟಿ ಪುನಸ್ಥಾಪನೆ ಮತ್ತು ಕಡಿಮೆ ದೃಷ್ಟಿ ನಿವಾರಣ ಕೇಂದ್ರ] ಎಂಬ ವಿಭಾಗವನ್ನು ಆರಂಭಿಸಿದೆ. ಪೂರ್ವ ಮೌಖಿಕ [Pre-verbal] ಮಕ್ಕಳಿಗೆ ಚಿಕಿತ್ಸೆ ನೀಡುವ ಉದ್ದೇಶದಿಂದಾಗಿ 2008ರಲ್ಲಿ ಆರಂಭವಾದ ಈ ವಿಭಾಗ ಈಗ ಸಂಪೂರ್ಣ ಸುಸಜ್ಜಿತ ವಿಭಾಗವಾಗಿ ಬಲವರ್ಧನೆಗೊಂಡಿದೆ. ಈ ವಿಭಾಗವು ಮಕ್ಕಳು ಮತ್ತು ವಯಸ್ಕರಿಗೆ ಸಮಗ್ರವಾಗಿ ದೃಷ್ಟಿಯ ಪುನರ್‌ಸ್ಥಾಪನೆ ಸೇವೆಗಳನ್ನು ಒದಗಿಸುತ್ತದೆ.

ಈ ವಿಭಾಗದ ಮುಖ್ಯ ಗುರಿ ಎಂದರೆ, ಮಗುವಿನಲ್ಲಿರುವ ದೃಷ್ಟಿಯ ದೋಷವನ್ನು ಆರಂಭದಲ್ಲೇ ಪತ್ತೆಮಾಡಿ, ನಂತರ ಅಭಿವೃದ್ಧಿಗೊಂಡಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಕಲೆಯನ್ನು ದೃಷ್ಟಿ ಪುನರ್‌ಸ್ಥಾಪನೆಯಲ್ಲಿ ಬಳಸಿಕೊಳ್ಳುವುದರ ಮೂಲಕ ದೃಷ್ಟಿಯು ಅಭಿವೃದ್ಧಿಯಾಗುವಂತೆ ಹಾಗೂ ಮಗುವಿನ ದೃಷ್ಟಿಯ ಸಾಮರ್ಥ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸುವುದಾಗಿದೆ. ವಯಸ್ಕರಿಗಾಗಿ ಕೆಲವು ಚಟುವಟಿಕೆಗಳನ್ನು ಮಾಡಿಸುವ ಮೂಲಕ ಆತ/ಆಕೆ ಅವರ ಬದುಕಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಹಾಗೂ ಅವರ ಆತ್ಮವಿಶ್ವಾಸವನ್ನು ಹೆಚ್ಚಾಗುವಂತೆ ಮಾಡಿ ಯಾರ ಸಹಾಯವಿಲ್ಲದೇ ಅವರು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವಷ್ಟು ಸ್ವತಂತ್ರವಾಗಿಸುತ್ತದೆ. ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿರುವ ರೋಗಿಗಳು ಸಹ ಗುಣಾತ್ಮಕವಾಗಿ ಅಭಿವೃದ್ಧಿಗೊಂಡಿರುವುದನ್ನು ಕಾಣಬಹುದು.







## ಪುನಸ್ಥಾ೯ಪನೆ ಕೇಂದ್ರದ ಮುಖ್ಯ ಅಂಗಗಳು ಈ ಕೆಳಕಂಡಂತಿವೆ.

- **ಆಪ್ತ ಸಮಾಲೋಚನೆ:** ರೋಗಿಯ ಕಣ್ಣಿನ ಮಸೂರದ ಸ್ಥಿತಿಯ ಬಗ್ಗೆ ಹಾಗೂ ಇವರಿಗೆ ಇರುವ ಕಣ್ಣಿನ ತೊಂದರೆಯ ನಿಖರದ ಬಗ್ಗೆ ಮುನ್ನರಿವು ಮೂಡಿಸಲು ಪ್ರತಿರೋಗಿಯ ಪೋಷಕರಿಗೆ ವೃತ್ತಿಪರ ಸಹಾಯಹಸ್ತವನ್ನು ನೀಡುವುದು. ದೃಷ್ಟಿಯ ನಷ್ಟದೊಂದಿಗೆ ಇರುವ ವಿವಿಧ ತೊಂದರೆಗಳನ್ನು [ಸಾಮಾಜಿಕ, ಮಾನಸಿಕ ಮತ್ತು ಕಾರ್ಯನಿರ್ವಹಣೆ] ಪತ್ತೆ ಮಾಡುವುದು ಮತ್ತು ನಿವಾರಿಸುವುದಕ್ಕೆ ಹಾಗೂ ವಿಶೇಷ ಕೌಶಲ್ಯ ತರಬೇತಿಗೆ ಪ್ರೋತ್ಸಾಹ ನೀಡುವುದು.




- **ಆರಂಭದಲ್ಲೇ ಹಸ್ತಕ್ಷೇಪ [0–5 ವರ್ಷಗಳು]:** ಮಕ್ಕಳಲ್ಲಿ ಇರುವ ದೃಷ್ಟಿಯನ್ನು ಸರಿಯಾಗಿ ಗುರುತಿಸಿ ಅದಕ್ಕೆ ಸೂಕ್ತವಾದ ಹಾಗೂ ಸರಿಯಾದ ವಿಶೇಷವಾದ ಚಿಕಿತ್ಸೆಯನ್ನು ನೀಡುವ ಮೂಲಕ ದೃಷ್ಟಿಯನ್ನು ಗರಿಷ್ಠ ಮಟ್ಟದವರೆಗೆ ಅಭಿವೃದ್ಧಿಪಡಿಸಬಹುದು. ಸಾಧನ, ಅರಿವು, ಶಾಶ್ವತ ಮತ್ತು ಸ್ಥಳಕ್ಕೆ ಸಂಬಂಧಪಟ್ಟ ದೃಷ್ಟಿಯ ಸಾಮರ್ಥ್ಯಗಳನ್ನು ಎಚ್ಚರಿಕೆಯಿಂದ ಗಮನಿಸಿ ವಿಶೇಷ ಮೌಲ್ಯಮಾಪನ ಮತ್ತು ನಿರ್ವಹಣೆ ಮಾಡಲಾಗುತ್ತದೆ.



- **ಪೋಷಕರಿಗೆ ತರಬೇತಿ:** ಪ್ರಪಂಚವನ್ನು ನೋಡಲು ಮಗುವಿನ ಕಣ್ಣಿನ ಸಾಮರ್ಥ್ಯ ದೃಷ್ಟಿಯನ್ನು ಪತ್ತೆಮಾಡಲು ಹಾಗೂ ಅವುಗಳನ್ನು ಗಮನಹರಿಸಲು ಪೋಷಕರಿಗೆ ಮತ್ತು ಆರೈಕೆ ಮಾಡುವವರಿಗೆ ತರಬೇತಿ ನೀಡಲಾಗುತ್ತಿದೆ.



* **ಶ್ರವಣ ಮತ್ತು ಅಂಧತ್ವವನ್ನು ಪತ್ತೆ ಮಾಡುವುದು:** ಶ್ರವಣ–ಅಂಧತ್ವ ಸಮಸ್ಯೆ ಇರುವ ಮಕ್ಕಳನ್ನು ಪ್ರಾರಂಭದಲ್ಲೇ ಗುರುತಿಸಿ ಅವರಿಗೆ ಸೂಕ್ತ ಚಿಕಿತ್ಸೆಯನ್ನು ನೀಡುವ ಸಲುವಾಗಿ ಸೆನ್ಸ್ ಇಂಟರ್‌ನ್ಯಾಷನಲ್ ಇಂಡಿಯಾದ ಪ್ರಯೋಜನವನ್ನು 2014ರಿಂದ ಪಡೆದು ಸೇವಾ ಯೋಜನೆಯನ್ನು ಆರಂಭಿಸಲಾಗಿದೆ. ಈ ಒಟೊ ಅಕೌಸ್ಟಿಕ್ ಎಮಿಷನ್ [OAE] ಸ್ಕ್ರೀನರ್‌ಗಳನ್ನು ಬಳಸಿಕೊಂಡು ನವಜಾತ ಶಿಶುವಿನಲ್ಲಿರುವ ಸಮಸ್ಯೆಗಳನ್ನು ಪತ್ತೆಮಾಡಲಾಗುತ್ತದೆ. ಇದು ತುಂಬಾ ಸರಳ ಮತ್ತು ಅಲ್ಪಕಾಲೀನ ವಿಧಾನವಾಗಿದೆ. ಆರ್.ಒ.ಪಿಗಾಗಿ ನವಜಾತ ಶಿಶುವಿನ ನೇತ್ರ ತಪಾಸಣೆಯೊಂದಿಗೆ ಇದನ್ನು ಮಾಡುವುದರಿಂದ ಶ್ರವಣ ಅಂಧತ್ವ ಗುರುತಿಸಲು ಸಹಾಯವಾಗುತ್ತದೆ.

* **ಚಿಕಿತ್ಸೆಗೆ ಕಳುಹಿಸುವುದು:** ಎರಡನೇ ಹಂತದಲ್ಲಿ ಆಗುವ ತೊಡಕುಗಳನ್ನು ತಡೆಗಟ್ಟಲು ಆಯಾ ವಯಸ್ಸಿಗೆ ಅನುಗುಣವಾಗಿ ಬೆಳವಣಿಗೆಗೆ ನೆರವು ನೀಡುವುದಕ್ಕೆ ಸಂಬಂಧಪಟ್ಟ ಸೇವೆಗಳಿಗೆ ಸಕಾಲದಲ್ಲಿ ಚಿಕಿತ್ಸೆಗೆ ಕಳುಹಿಸಲಾಗುತ್ತದೆ. ಸರ್ಕಾರಿ ಯೋಜನೆಗಳು ಮತ್ತು ರಿಯಾಯಿತಿಗಳು, ಜಿಲ್ಲಾವಾರು ಸಂಪರ್ಕ ವಿವರಗಳು, ಎಸ್‌ಎಸ್‌ಎ, ಆರ್‌ಎಂಎಸ್‌ಎ, ಡಿವೈಪಿಸಿ, ಡಿಇಐಸಿ ಇತ್ಯಾದಿಗೆ ಸಂಬಂಧಪಟ್ಟಂತೆ ರೋಗಿಗಳಿಗೆ/ಪೋಷಕರಿಗೆ ಮಾರ್ಗದರ್ಶನ ನೀಡುವುದು.

* **ಸಮಗ್ರ ಕಡಿಮೆ ದೃಷ್ಟಿ ಮೌಲ್ಯಮಾಪನ:** ದೃಷ್ಟಿ ಉಳಿದಿರುವವರಿಗೆ ಕೂಲಂಕುಷ ಮೌಲ್ಯಮಾಪನ ಹಾಗೂ ಕಡಿಮೆ ದೃಷ್ಟಿ ಸಮಸ್ಯೆ ನಿವಾರಿಸುವ ಸೂಕ್ತ ಸಾಧನಗಳಿಗೆ ನೆರವು ನೀಡಲಾಗುತ್ತದೆ. ಹಾಗೂ ಉತ್ತೇಜಿತ ಪರಿಸರದಲ್ಲಿ ಇಂಥ ಸಾಧನಗಳನ್ನು ಉಪಯೋಗಿಸಲು ಅವರಿಗೆ ತರಬೇತಿ ನೀಡಲಾಗುತ್ತದೆ.



* **ಶೈಕ್ಷಣಿಕ ಮಾರ್ಗದರ್ಶನ:** ರೋಗದ ರೀತಿ ಮತ್ತು ಅವುಗಳ ಮುನ್ನರಿವಿನ ಆಧಾರದ ಮೇಲೆ ಸೂಕ್ತ ಕಲಿಕಾ ವಿಧಾನಗಳಿವೆ. [ಸಾಮಾನ್ಯ ಅಕ್ಷರ ಮುದ್ರಣ, ದೊಡ್ಡ ಅಕ್ಷರ ಮುದ್ರಣ, ಬ್ರೈಲ್, ಶ್ರವಣ ಪುಸ್ತಕಗಳು ಮತ್ತು ವಿಶೇಷ ಸಾಫ್ಟ್‌ವೇರ್] ಹಾಗೂ ಶೈಕ್ಷಣಿಕ ಮಾದರಿಗಳು [ಸಾಮಾನ್ಯ ನಿಯತಗಳು, ವಿಶೇಷ, ಸಮಗ್ರ ಮತ್ತು ಸೇರ್ಪಡೆ] ಸೇವೆಯನ್ನು ಒದಗಿಸಲಾಗುತ್ತದೆ.

* **ಪರಿಸರದ ಮಾರ್ಪಾಡುಗಳು:** ಉಳಿದಿರುವ ದೃಷ್ಟಿ ಮತ್ತು ಇತರ ಸಂವೇದನೆಗಳ ಗರಿಷ್ಠ ಬಳಕೆಗಾಗಿ ಪರಿಸರದಲ್ಲಿ ಸರಳ ಅಳವಡಿಕೆಗಾಗಿ ಸಲಹೆ ಮಾಡಲಾಗುತ್ತದೆ. ಇದು ಬಣ್ಣ ಮತ್ತು ಬೆಳಕಿನ ವ್ಯತ್ಯಾಸ ಮತ್ತು ಸ್ಪರ್ಶ ಹಾಗೂ ಗ್ರಹಿಕೆಗಳ ಸುಳಿವನ್ನು ಒಳಗೊಂಡಿರುತ್ತದೆ.

* **ವೃತ್ತಿ ಆಧಾರಿತ ಮಾರ್ಗದರ್ಶನ:** ಕಣ್ಣಿನ ಮಸೂರದ ಕಾರ್ಯಗಳು ಮತ್ತು ಅಗತ್ಯತೆಗಳ ಆಧಾರದ ಮೇಲೆ ಸೂಕ್ತ ವೃತ್ತಿ ಆಧಾರಿತ ಅವಕಾಶಗಳನ್ನು ಪತ್ತೆಮಾಡಲು ಸಲಹೆ ಮತ್ತು ಮಾರ್ಗದರ್ಶನ ಹಾಗೂ ಸಹಕಾರ ನೀಡಲಾಗುತ್ತದೆ.

* **ತಂತ್ರಜ್ಞಾನ ಪ್ರವೇಶವನ್ನು ಪಡೆಯುವಿಕೆ:** ತಂತ್ರಜ್ಞಾನ ಸುಧಾರಣೆಯ ವಿವಿಧ ಗ್ಯಾಜೆಟ್‌ಗಳ [ಮೊಬೈಲ್, ಕಂಪ್ಯೂಟರ್ ಇತ್ಯಾದಿ] ಸಾಧನಗಳನ್ನು ಪಡೆಯಲು ನೆರವಾಗುವುದಕ್ಕೆ ವಿಶೇಷ ಸಾಫ್ಟ್‌ವೇರ್ ಬಳಕೆಗಳ ಬಗ್ಗೆ ತರಬೇತಿ ನೀಡುವುದು.

* **ಪೂರಕ ಪ್ರಯೋಜನಗಳನ್ನು ಪಡೆದುಕೊಳ್ಳಲು ಮಾರ್ಗದರ್ಶನ:** ಸರ್ಕಾರದ ವಿವಿಧ ಪ್ರಯೋಜನಗಳು ಮತ್ತು ರಿಯಾಯಿತಿಗಳ ಬಗ್ಗೆ ಫಲಾನುಭವಗಳನ್ನು ಪಡೆಯುವಂತೆ ಎಲ್ಲಾ ಅರ್ಹ ವ್ಯಕ್ತಿಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುವುದು.

* **ರಿಯಾಯಿತಿಗಳು:** ಅಂಗವೈಕಲ್ಯ ಇರುವ ವ್ಯಕ್ತಿಗಳಿಗೆ ಅಂಗವೈಕಲ್ಯ ಪ್ರಮಾಣಪತ್ರದ ಆಧಾರದ ಮೇಲೆ ಪ್ರಯಾಣ ಭತ್ಯೆಗಳು, ಮಾಸಿಕ ಪಿಂಚಣಿ, ಶೈಕ್ಷಣಿಕ ಪ್ರಯೋಜನಗಳು ಹಾಗೂ ಶೈಕ್ಷಣಿಕ ಮೀಸಲಾತಿಯಂತಹ ಪೂರಕ ಪ್ರಯೋಜನಗಳನ್ನು ಪಡೆದುಕೊಳ್ಳುವಂತೆ ಸಲಹೆ ಮಾಡುವುದು.

## ಯಾರು ಇದರ ಪ್ರಯೋಜನ ಪಡೆಯುತ್ತಾರೆ?

ಸಂಪೂರ್ಣ ಅಂಧತ್ವ, ಕಡಿಮೆ ದೃಷ್ಟಿ, ಶ್ರವಣ ಅಂಧತ್ವ ಹಾಗೂ ಬಹುವೈಕಲ್ಯ [ಹೆಚ್ಚುವರಿ ಸಮಸ್ಯೆಗಳೊಂದಿಗೆ ದೃಷ್ಟಿದೋಷ] ಇರುವವರು ಮಾತ್ರ ಇದರ ಪ್ರಯೋಜನಗಳನ್ನು ಪಡೆಯಬಹುದು.

## ರೋಗಿಯನ್ನು ತಜ್ಞವೈದ್ಯರ ಬಳಿಗೆ ಕಳುಹಿಸಲು ಇರುವ ಮಾನದಂಡಗಳು ಯಾವುವು?

- ಕಣ್ಣಿನ ಚಿಕಿತ್ಸೆಯ ನಂತರವು ಕಣ್ಣಿನ ದೃಷ್ಟಿ 6/12 ಕ್ಕಿಂತ ಕಡಿಮೆ ಮತ್ತು ಹದಗೆಟ್ಟಿರುವ ಕಣ್ಣಿನ ದೃಷ್ಟಿದೋಷ ಹೊಂದಿರುವವರು.

- ಜನಿಸಿದ ದಿನದಿಂದ ಯಾವುದೇ ವಯೋಮಾನದವರೆಗೂ.

- ಸಾಮಾನ್ಯ ದೃಷ್ಟಿ ಹೊಂದಿರುವ ವ್ಯಕ್ತಿಗಳ ರೀತಿಯಲ್ಲಿ ಜೀವನ ನಡೆಸಲು ಅನುಕೂಲವಾಗುವಂತೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡುವುದು.

- ದೃಷ್ಟಿಯ ಪುನರ್ಸ್ಥಾಪನೆ ಮತ್ತು ಕಣ್ಣಿನ ದೃಷ್ಟಿಯ ದೋಷವನ್ನು ಪ್ರಾರಂಭದಲ್ಲೇ ಪತ್ತೆಮಾಡಿ ತಕ್ಷಣ ಮಧ್ಯಸ್ಥಿಕೆ ವಹಿಸಿ ಎಷ್ಟು ಸಾಧ್ಯವೋ ಅಷ್ಟು ಶೀಘ್ರ ಕ್ರಮ ಕೈಗೊಳ್ಳುವಂತೆ ಪೋಷಕರಿಗೆ ಮಾರ್ಗದರ್ಶನ ನೀಡುವುದು.

- ಈಗಿರುವ ತಂತ್ರಜ್ಞಾನದ ಬಗ್ಗೆ ಸೂಕ್ತ ಶಿಕ್ಷಣವನ್ನು ನೀಡಿ ಹಾಗೂ ಮುಂದಿನ ಚಿಕಿತ್ಸೆಯು ಸಾಧ್ಯವಿಲ್ಲದಿದ್ದಾಗ ಜೀವನಶೈಲಿಯನ್ನೇ ಬದಲಾವಣೆ ಮಾಡಿಕೊಳ್ಳುವಂತೆ ಸೂಕ್ತ ಸಲಹೆಗಳನ್ನು ತಿಳಿಸುವುದು/ಕೊಡುವುದು.

- ಕೆಲವರಿಗೆ ಸಮೀಪದೃಷ್ಟಿ ಉತ್ತಮವಾಗಿದ್ದರೂ ಸಹ ದೈನಂದಿನ ಚಟುವಟಿಕೆಗಳಲ್ಲಿ ತೊಂದರೆಯಾಗಿರುತ್ತದೆ. ಏಕೆಂದರೆ ಬಾಹ್ಯ ದೃಷ್ಟಿ ದೋಷದ ದುರ್ಬಲ ಬಣ್ಣ ಗುರುತಿಸುವಿಕೆಯಲ್ಲಿಯೂ ಸಹ ದುರ್ಬಲವಾಗಿರುತ್ತದೆ.

- ಬಹುವೈಕಲ್ಯ ಹೊಂದಿರುವವರಲ್ಲಿ ತಾವೇ ಸ್ವತಂತ್ರರಾಗಿ ಜೀವನ ನಡೆಸುವಂತೆ ಮಕ್ಕಳಿಗೆ ಉತ್ತೇಜನ ನೀಡುವಂತೆ ಅವರ ಪೋಷಕರಿಗೆ ಮಾರ್ಗದರ್ಶನ ನೀಡಬೇಕು.

### "ಅಂತಿಮ ಗುರಿ"

**ಉಳಿದಿರುವ ದೃಷ್ಟಿ ಮತ್ತು ಇತರ ಸಂವೇದನೆಗಳನ್ನು ಆಧುನೀಕರಣಗೊಳಿಸುವುದು.**
**ವೈಯಕ್ತಿಕ ಸ್ವಾತಂತ್ರ್ಯದ ಮಟ್ಟವನ್ನು ಹೆಚ್ಚಿಸುವುದು.**



ನಿಮ್ಮ ಪ್ರಶ್ನೆಗಳಿಗಾಗಿ/ಉಲ್ಲೇಖಗಳಿಗಾಗಿ ಸಂಪರ್ಕಿಸಿ

ದೃಷ್ಟಿ ಪುನರ್ವಸತಿ ವಿಭಾಗ

**ನಾರಾಯಣ ನೇತ್ರಾಲಯ-1**

ದೂರವಾಣಿ ಸಂಖ್ಯೆ: 080-66121484/ 1490, +91-8792479345

**ನಾರಾಯಣ ನೇತ್ರಾಲಯ-2**

ದೂರವಾಣಿ ಸಂಖ್ಯೆ: 080-66660691/ 0718, +91-6366556332

**E-mail: rehab@narayananethralaya.com**

pediatric eye care - narayana nethralaya

CARE FOR THE FUTURE

THE BEST EYE HOSPITAL IN KARNATAKA RANKED #1 FOR MORE THAN A DECADE

**ಎನ್.ಎನ್-1** #121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು-560010, ಭಾರತ
ಟೆಲಿಫೋನ್:+91-80-66121643
**Email - infonn1@narayananethralaya.com**

**ಎನ್.ಎನ್-2** ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ ಆವರಣ)
#258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ,
ಬೆಂಗಳೂರು-560099, ಭಾರತ
ಟೆಲಿಫೋನ್: +91-80-66660655-0658
**Email - infonn2@narayananethralaya.com**

**ಎನ್.ಎನ್-3** #1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು-560038, ಭಾರತ
ಟೆಲಿಫೋನ್: +91-80-66974000/01/02
**Email - infonn3@narayananethralaya.com**

**ಎನ್.ಎನ್-4** #63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು, ಬೆಂಗಳೂರು-560076, ಭಾರತ
ಟೆಲಿಫೋನ್: 080-66121618-1619, +91-9513522400,
+91-9538822400
**Email - infonn4@narayananethralaya.com**

Nnethralaya

www.narayananethralaya.org

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು ಇಲ್ಲಿ ಸ್ಕ್ಯಾನ್ ಮಾಡಿ